## ಗ್ಲ್ಯಾಮರಸ್ ಬೆಡಗಿಯರಿಗೂ...

ಮಾಡರ್ನ್ ಉಡುಪು ತೊಟ್ಟು ವೈಯಾರದಿಂದ ಕತ್ತುಕೊಂಕಿಸಿ ಕ್ಯಾಟ್‌ವಾಕ್ ಮಾಡುವ ಲಲನೆಯರಿಗೂ ಇಂದು ಒಡವೆ ದಾಹ ಹೆಚ್ಚಿದೆ. ಉಡುಪಿಗೆ ತಕ್ಕ ಮ್ಯಾಚಿಂಗ್ ಒಡವೆ ತೊಟ್ಟು ಮೆರೆಯುವ ಹುಡುಗಿಯರಿಗೆ ಇಂದಿನ ಫ್ಯಾಷನ್ ಟ್ರೆಂಡ್‌ಗೆ ತಕ್ಕಂತೆ ಚಿನ್ನದಾಭರಣ ತೊಡುವ ಬಯಕೆ.

ಫ್ಯಾಷನಬಲ್ ಉಡುಗೆ ತೊಟ್ಟು ಅದಕ್ಕೊಪ್ಪುವ ಒಡವೆ ತೊಡದಿದ್ದರೆ ಹೇಗೆ ಎಂಬುದು ಈ ಹುಡುಗಿಯರ ಪ್ರಶ್ನೆ. ಅದು ಜೀನ್ಸ್‌ಪ್ಯಾಂಟ್, ಬ್ಯಾಟ್‌ವಿಂಗ್ ಟಾಪ್ ತೊಟ್ಟರೂ ಹಗುರವಾದ ಒಡವೆ ಹಾಕಿಕೊಂಡರೇ ಸಖತ್ ಆಗಿ ಕಾಣುವುದು. ಡ್ರೆಸ್‌ನ ಬಣ್ಣಕ್ಕೆ ಒಪ್ಪುವ ಹರಳುಗಳಿಂದ ಕೂಡಿದ ಒಡವೆ ತೊಡುವುದು ಈಗೀಗ ಫ್ಯಾಷನ್ ಆಗಿದೆ. 'ತೆಳ್ಳಗಿನ ಸರಕ್ಕೆ ದಪ್ಪ ಪೆಂಡೆಂಟ್ ಹೊಂದಿಸಿ ಮಿಕ್ಸ್ ಅಂಡ್ ಮ್ಯಾಚ್ ಕೂಡ ಮಾಡಬಹುದು. ಮುಖಕ್ಕೆ ತೆಳುವಾಗಿ ಬೇಸ್ ಕ್ರೀಮ್ ಹಚ್ಚಿ ಪೌಡರ್ ಲೇಪಿಸಿಕೊಂಡರೆ ಸರಳ ಅಲಂಕಾರವೂ ಮುಗಿದಂತೆ. ಹೆಚ್ಚಾಗಿ ಸೆಲೆಬ್ರಿಟಿಗಳನ್ನು, ಸಿನಿಮಾ–ಸೀರಿಯಲ್ ತಾರೆಯರನ್ನು ಅನುಕರಿಸುವವರೇ ಇಂದಿನ ಯುವತಿಯರು ಚಿನ್ನದ ಒಡವೆಯನ್ನು ತರಾವರಿ ಸ್ಟೈಲ್‌ನಲ್ಲಿ ಧರಿಸಲು ಇಷ್ಟಪಡುವುದು' ಎನ್ನುತ್ತಾರೆ ಮಾಡೆಲಿಂಗ್ ತಾರೆ ಅನ್ವಿತಾ ಚೌಧರಿ.

'ಉಡುಪು–ಒಡವೆ ಎರಡರಲ್ಲೂ ಕ್ರೇಜ್ ಇರುವುದರಿಂದ ಚಿನ್ನದ ಒಡವೆಗಳು ಎವರ್‌ಗ್ರೀನ್ ಟ್ರೆಂಡ್ ಆಗಿವೆ. ಹೀಗಾಗಿ ಹೊನ್ನಿನ ಮೋಹ ಎಂದಿಗೂ ಮಹಿಳೆಯರಲ್ಲಿ ಕಡಿಮೆಯಾಗುವುದೇ ಇಲ್ಲ' ಎಂಬುದು ಅನ್ವಿತಾ ನಿಲುವು.

ಮೊಮ್ಮಗಳ ಕೊರಳನ್ನು ಅಲಂಕರಿಸುತ್ತಿದೆ. ಅಮ್ಮಂದಿರು ಕಿವಿತುಂಬ ಕಾಣುವಂತೆ ತೊಡುತ್ತಿದ್ದ, ಔಟ್‌ಡೇಟೆಡ್ ಎನಿಸಿದ್ದ ಕೆಂಪು ಹರಳಿನ ಜುಮುಕಿ ಮತ್ತೆ ಹೊಸ ಅವತಾರದೊಂದಿಗೆ ಮಗಳ ಕಿವಿಯಲ್ಲಿ ನೇತಾಡುತ್ತಿದೆ. ಮಿರಿಮಿರಿ ಮಿಂಚುತ್ತಿದ್ದ ಉದ್ದನೆಯ ಹಾರ ಧರಿಸಿ ಪುಟ್ಟಮಲ್ಲಿಯರು ಇಂದು ಮದುವೆ, ಮುಂಜಿಗಳಂತಹ ಸಮಾರಂಭಗಳಲ್ಲಿ ಬಿಗುಮಾನ ತೋರುತ್ತಿದ್ದಾರೆ. ಚಂದದ ನೆಕ್ಲೇಸ್, ಅಂದದ ಬಳೆಗಳು ಆಧುನಿಕತೆಯ ಛಾಪಿನೊಂದಿಗೆ ಮತ್ತೆ ಪ್ರತ್ಯಕ್ಷವಾಗಿವೆ. ಅಜ್ಜಿ ಕಾಲದ ಒಡವೆಗಳು ಮತ್ತೆ ಫ್ಯಾಷನ್ ಟ್ರೆಂಡ್ ಆಗಿವೆ.

ಕೆಲ ಒಡವೆಗಳಲ್ಲಿ ಪಾರಂಪರಿಕ ಲುಕ್ ಇದ್ದರೂ ಸಮಕಾಲೀನ ಟ್ರೆಂಡ್‌ನೊಂದಿಗೆ ಯುವತಿಯರ ಮನತಣಿಸುತ್ತಿವೆ. ಬೈತಲೆ ಬೊಟ್ಟು ಆಗಿರಲಿ, ಸರವೇ ಇರಲಿ, ಹೊನ್ನಿನ ಮೇಲೆ ಮುತ್ತು, ಪಚ್ಚೆ, ನೀಲ, ಹವಳಗಳನ್ನು ಕೂರಿಸಿ ಹೊಸ ವಿನ್ಯಾಸದೊಂದಿಗೆ ಬಂದ ಆಭರಣ ಸೀರೆಯ ಬಣ್ಣಕ್ಕೆ ಮ್ಯಾಚಿಂಗ್ ಆಗಿ 'ಮಿಕ್ಸ್ ಅಂಡ್ ಮ್ಯಾಚ್' ಪರಿಕಲ್ಪನೆಯನ್ನು ನೆನಪಿಗೆ ತರುತ್ತದೆ.

'ತಮ್ಮ ಮನೆಯಲ್ಲಿ ಅಜ್ಜಿ ಮುತ್ತಜ್ಜಿಯರ ಕಾಲದ ಒಡವೆಗಳಿದ್ದರೆ ನಮ್ಮ ಮಳಿಗೆಗೆ ತನ್ನಿ. ಪರಂಪರೆಗೆ ಕೊಂಚವೂ ಧಕ್ಕೆಯಾಗದಂತೆ ಹೊಸ ವಿನ್ಯಾಸದಲ್ಲಿ ಇಂದಿನ ಟ್ರೆಂಡ್‌ಗೆ ತಕ್ಕಂತೆ ಹೊಸ ರೂಪ ನೀಡುತ್ತೇವೆ. ಬೈತಲೆ ಬೊಟ್ಟು, ಜುಮುಕಿ, ನೆಕ್ಲೇಸ್, ಓಲೆ, ಬಳೆ ಮುಂತಾದವು ಹಳೆಯ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡಿ ವಿಭಿನ್ನವಾಗಿ ವಿನ್ಯಾಸ ಮಾಡಿ ಕೊಡುತ್ತೇವೆ' ಎಂದು ಹೇಳುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಜ್ಯುವೆಲ್ಲರಿ ವರ್ತಕ ಪವನ್ ಚಂದನ್ ಕುಮಾರ್.

'ಒಡವೆಗಳಲ್ಲಿ ಟು ಇನ್ ವನ್' ಪರಿಕಲ್ಪನೆಯೂ ಈಗಿನ ಟ್ರೆಂಡ್. ಜುಮ್ಕಾ, ಜಡೆ ಬಿಲ್ಲೆಗಳನ್ನು ನೆಕ್‌ಪೀಸ್ ಆಗಿಯೂ ಬಳಸಬಹುದು. ಸರವನ್ನು ಎರಡೆಳೆಯಾಗಿ ಧರಿಸಿ ಗಿಡ್ಡವಾಗಿ ಕತ್ತು ತುಂಬ ಕಾಣಬೇಕೆನಿಸಿದರೆ ನೆಕ್ಲೇಸ್ ತರ ಫೋಲ್ಡ್ ಮಾಡಿಯೂ ಧರಿಸಿಕೊಳ್ಳಬಹುದು. ಒಂದೇ ಒಡವೆ 'ಮಲ್ಟಿಪರ್ಪಸ್ ಆಭರಣ'ವಾಗಿ ಬಳಸಿದರೆ ಅದು ಫ್ಯಾಷನ್‌ಪ್ರಿಯರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ. ಇಂದಿನ ಹೊಸತಲೆಮಾರಿನ ಹುಡುಗಿಯರು ಟು ಇನ್ ವನ್ ಆಭರಣವನ್ನು ಬಹಳ ಇಷ್ಟಪಟ್ಟು ಧರಿಸುತ್ತಾರೆ' ಎನ್ನುತ್ತಾರೆ ವರ್ತಕ ಪವನ್.



### ಕುಸುರಿ ಕೆತ್ತನೆಯ ಒಡವೆಗಳು

ಒಡವೆಯ ಮೇಲೆ ಹರಳುಗಳ ಮಾಯಾಲೋಕ ವಿಭಿನ್ನ ಪರಿಕಲ್ಪನೆ. ಚಿನ್ನದ ಅಡಿಪಾಯವಿರುವ ಒಡವೆಗೆ ಅಮೆರಿಕನ್ ಡೈಮಂಡ್, ಕಲರ್ ಡೈಮಂಡ್, ಮುತ್ತು, ಹವಳ, ನೀಲ, ಪಚ್ಚೆ ಮುಂತಾದ ನವರತ್ನಗಳನ್ನು ಸೇರಿಸಿ ಕಸೂತಿ ವಿನ್ಯಾಸದಲ್ಲಿ ಸಿದ್ಧಪಡಿಸಿದ ಒಡವೆ ಇಂದಿನ ಹೊಸ ಫ್ಯಾಷನ್ ಟ್ರೆಂಡ್. ಕಾಸಿನ ಸರ, ಗೆಜ್ಜೆಮಾಲಾಕ್, ಅವಲಕ್ಕಿ ಸರ, ಮುಷ್ಟಿ ಸರ, ಕಂಠೀಹಾರ, ಕೊತ್ತಂಬರಿ ಸರ, ಜುಮುಕಿ, ಕಿವಿಯೋಲೆ – ಅಷ್ಟೇ ಏಕೆ, ಹಳೆಯ ಬೆಳ್ಳಿಯ ಒಡವೆ ಕೂಡ ಹೊಸ ವಿನ್ಯಾಸ ಪಡೆದುಕೊಳ್ಳುತ್ತಿದೆ.

ಇವುಗಳ ಜೊತೆಗೆ ಚಿನ್ನದ ಗುಂಡುಗಳನ್ನು ದಾರದಲ್ಲಿ ಪೋಣಿಸಿ ತಯಾರಿಸಿದ ಹಗುರವಾದ ಆಭರಣ ಜೋಮಾಲೆ ಕೂಡ ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ. ಕತ್ತಿನಲ್ಲಿ ಧರಿಸಿದಾಗ ಸಖತ್ ಲುಕ್ ಕೊಡುವ ಜೋಮಾಲೆ 'ಕೊಡಗಿನ ಕೊಡುಗೆ'. ಆದರೆ ಅದೀಗ ಎಲ್ಲ ಭಾಗಗಳಲ್ಲೂ ಮಹಿಳೆಯರು ಇಷ್ಟಪಟ್ಟು ಧರಿಸುವ ವಿಶಿಷ್ಟ ಆಭರಣಗಳಲ್ಲೊಂದಾಗಿ ಫ್ಯಾಷನ್‌ಜಗತ್ತಿನಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ.

ಚಿನ್ನ ಆಪದ್ಧನ ಅಲ್ಲವೇ? ಆದರೆ ಇಂದಿನ ಗಗನಕ್ಕೇರಿದ ಚಿನ್ನದ ಬೆಲೆಯಲ್ಲಿ ಹೊಸ ಚಿನ್ನವನ್ನು ಖರೀದಿಸುವುದು ಎಂದರೆ ಅದು ಮಧ್ಯಮವರ್ಗದವರಿಗೆ ಗಗನಕುಸುಮವೇ ಸರಿ. ಮನೆಯಲ್ಲಿ ಅಜ್ಜಿಯರ ಕಾಲದ ಚಿನ್ನವಿದ್ದರೆ ಅದನ್ನೇ ಧರಿಸಿ. ಈಗಿನ ಫ್ಯಾಷನ್ ಕೂಡ ಅದೇ. 'ಓಲ್ಡ್ ಈಸ್ ಗೋಲ್ಡ್', ಓಲ್ಡ್ ಗೋಲ್ಡ್ ಈಸ್ ಎವರ್‌ಗ್ರೀನ್ ಟ್ರೆಂಡ್' ಎಂಬಂತಾಗಿದೆ ಈಗಿನ ಫ್ಯಾಷನ್ ಜಗತ್ತು

ಆಕಾರದಲ್ಲಿ ಚಂದ್ರನನ್ನೇ ಹೋಲುವ ಚಂದ್ರಾಭರಣ ಇಂದಿನ ಲೇಟೆಸ್ಟ್ ಟ್ರೆಂಡ್. ಈ ಒಡವೆ ವಿನ್ಯಾಸ ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ. ಈ ಆಭರಣ ಪದಕ, ಓಲೆ, ವೈವಿಧ್ಯಗಳಲ್ಲಿ ಲಭ್ಯವಿದೆ. ಸೀರೆ, ಚೂಡಿದಾರ್, ಲೆಹಂಗಾ, ಲಂಗ ದಾವಣಿ... ಹೀಗೆ ಯಾವುದೇ ತರಹದ ಉಡುಪಿಗೂ ಮ್ಯಾಚ್ ಆಗಿ ಸಖತ್ ಲುಕ್ ಕೊಡುತ್ತದೆ.

### ಚಿನ್ನದ ಮಾಸ್ಕ್ ಕ್ರೇಜ್!

ಮಾಸ್ಕ್ ಧರಿಸುವುದು ಸೋಂಕಿನಿಂದ ಸ್ವಯಂ ರಕ್ಷಣೆ ಪಡೆಯಲು. ಆದರೆ ಇಲ್ಲೂ ಫ್ಯಾಷನ್ ಬಂದಿದೆ. ಚಿನ್ನದಲ್ಲೇ ಮಾಡಿದ ಮಾಸ್ಕ್ ಮಾರುಕಟ್ಟೆಗೆ ಬಂದಿದೆ. ಆಭರಣಪ್ರಿಯರು ಈ ಚಿನ್ನದ ಮಾಸ್ಕ್ ಧರಿಸಿ ಮಿಂಚುತ್ತಿದ್ದಾರೆ.

ಮದುವೆಗಳಲ್ಲೂ ಮಾಸ್ಕ್ ಧರಿಸುವುದು ಕಡ್ಡಾಯವಾದ ಹಿನ್ನೆಲೆಯಲ್ಲಿ ವಧುವರರಿಗಾಗಿಯೇ ಚಿನ್ನದ ಮಾಸ್ಕ್ ತಯಾರಿಸಿ ಅದನ್ನು ಧರಿಸಿ ಮದುವೆಯಾಗಿರುವ ಸುದ್ದಿ ಕೊಯಮತ್ತೂರಿನಿಂದ ಬಂದಿದೆ. ಗುಜರಾತ್‌ನ ಸೂರತ್‌ನಲ್ಲಿ ಚಿನ್ನದ ಮಾಸ್ಕ್ ಅನ್ನೂ ಮೀರಿಸಿ ಚಿನ್ನದ ಮೇಲೆ ವಜ್ರದ ಹರಳುಗಳನ್ನು ಕೂರಿಸಿ ಮಾಸ್ಕ್ ತಯಾರಿಸಿ ಧರಿಸಿರುವುದು ಜನರಲ್ಲಿ ಒಡವೆ ಮೇಲಿನ ಕ್ರೇಜ್ ಎಷ್ಟಿದೆ ಎಂಬುದನ್ನು ಸಾಬೀತುಪಡಿಸುತ್ತದೆ.

ಚಿನ್ನದ ಮಾಸ್ಕ್‌ಗೆ ಒಂದು ಲಕ್ಷ ರೂಪಾಯಿಗಳಾದರೆ, ವಜ್ರವನ್ನೊಳಗೊಂಡ ಮಾಸ್ಕ್‌ಗೆ ನಾಲ್ಕು ಲಕ್ಷ ರೂಪಾಯಿ. ಹಣ ಎಷ್ಟೇ ಆದರೂ ಫ್ಯಾಷನ್ ಹುಚ್ಚಿನಲ್ಲಿ ಹಣವೇ ನಗಣ್ಯ ಉಳ್ಳವರಿಗೆ!